**ಓ.ಎಸ್ ನಂ. 45/2023**

**ಪಿ.ಡಬ್ಲೂಃ 1**

**ಇಂದು ದಿನಾಂಕ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯ ನನ್ನ ತಿಳುವಳಿಕೆ ಮಟ್ಟಿಗೆ ನಿಜವಿರತ್ತದೆ ನಾನು ಓದಿ ತಿಳಿದುಕೊಂಡು ಅದನ್ನು ನಾನು ನನ್ನ ಸಹಿ ಹಾಕಿರುತ್ತೇನೆ.

**ಮುಖ್ಯ ವಿಚಾರಣೆಃ ವಾದಿಪರ ವಕೀಲರಿಂದ.**

ಆಸ್ತಿ ನಂ–1182 ನೇದ್ದರ ಎರಡು ಉತಾರೆಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ–1 ಮತ್ತು 2 ಎಂದು ಗುರತಿಸಲಾಯಿತು. ಸರ್ವೆ ನಂ 59/2 ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ–3 ಎಂದು ಗುರುತಿಸಲಾಯಿತು. ಒಂದು ಠರಾವು ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ–4 ಎಂದು ಗುರುತಿಸಲಾಯಿತು. ಹೆಸ್ಕಾಂ ಅಧಿಕಾರಿಗಳು ನೀಡಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ–5 ಎಂದು ಗುರುತಿಸಲಾಯಿತು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಡಿಸಿಸಿ ಬ್ಯಾಂಕ ವಿಜಯಪೂರರವರು ನೀಡಿದ ಒಂದು ಅಧಿಕಾರ ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಪಿ– 6 ಎಂದು ಗುರುತಿಸಲಾಯಿತು. ಬಿಡಿಸಿಸಿ ಬ್ಯಾಂಕರವರು ನೀಡಿದ ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಪಿ–7 ಎಂದು ಗುರುತಿಸಲಾಯಿತು. 14 ಬಾವಚಿತ್ರಗಳನ್ನು ಮತ್ತು ಅವುಗಳ ನೆಗೆಟಿವಗಳನ್ನು ಅವುಗಳನ್ನು ಒಟ್ಟಾಗಿ ನಿ.ಪಿ 8 ಎಂದು ಗುರುತಿಸಲಾಯಿತು. ವಿದ್ಯುತಶಕ್ತಿ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ–9 ಎಂದು ಗುರುತಿಸಲಾಯಿತು. ಟೆಲಿಫೋನ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ–10 ಎಂದು ಗುರುತಿಸಲಾಯಿತು.

ಆದ್ದರಿಂದ ನಮ್ಮ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**<u>ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದ</u>**

**<u>ಪ್ರತಿವಾದಿಯರನ್ನು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇದ್ದು ಪಾಟೀಸವಾಲಿಗಾಗಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ. ಇಂಡಿ.